matters connected with the operation of the gold mining industry. It is, therefore, necessary that our own technical personnel should be represented on this Committee. The best thing to do would be to put such experts on the Committee who can stay on the premises of the K.G.F., devote their entire time to it and give the benefit of their advice.

While I am on this subject, I would like to make a personal reference to two of my friends who were my colleagues here until recently, namely, Sri Thomas and Sri Swamidurai. Today, by virtue of the Kolar Gold Fields (Nationalisation) Act, they have ceased to be members of this House because they are disqualified. In fact, when the Bill was under discussion in this House, a suggestion was made on the floor of the House that something must be done in this behalf and that they should not be disqualified during the life of the present Assembly. If I remember aright, the then Minister in charge of the Bill, Sri Siddaveerappa gave a sort of an assurance that he would examine the question and enable the two persons to continue as members of the present Assembly. Not that I contend that the disqualification should be removed permanently. The assurance given by the then Minister in charge of the Bill is certainly a reasonable one and I am sure it is in accordance with the wishes of a large section of this House. Even now, that suggestion minght be considered. I shall leave the matter at that.

There is only one matter to which I would like to make a reference and then I shall conclude my remarks. It has been mentioned that sufficient safeguards are going to be provided to the Backward classes and the linguistic minorities. I would very much wish that some more details should be given to us. I may remind the House that, when the States Reorganisation Bill was being discussed in this House, doubts were expressed from every section of the House on the question of linguistic minorities and others. There is an assurance in the Address that their interest will be safeguarded. As a matter of fact, wherever the Chief Minister has spoken during the last month, he has been very particular to give an assurance to the linguistic minorities that their interests will be safeguarded. Coming as I do from an area which is predominantly a Telugu-speaking area, I must say on behalf of the largeT elugu population of the Kolar District that this is a comforting assurance and I hope that concrete measures will be taken to translate it into action. I would like to make a suggestion through you, Sir, to Government to issue a White Paper very soon regarding the measures that they propose to embark upon to safeguard the interests of Backward Classes and linguistic minorities. Fortunately for us, one of us, namely, Sri Mariappa who was a member of the Backward Class Commission is now the Finance Minister in the present Government. I am sure he will bring to bear upon his work that scholarship and intimate knowledge that he has by virtue of his having been a member of the Backward Class Commission.

With these words, I thank you, Sir, for the very great indulgence you have shown me and I commend my amendment for kind acceptance of the House.

MEMBERS SWORN.

Mr SPEAKER.—A suggestion has been made by a few members to me that they might be allowed to take oath. I, therefore, give them special permission to take oath.

MEMBERS SWORN.

1. Sri Annarao (Afzalpur)
2. Sri S. Rudrappa (Chitapur)

Business of the House.

Mr SPEAKER.—Before I call upon any Hon'ble Member to speak, I would like to know how many Hon'ble Members are anxious to take part in the debate. I would request them to stand in their seats. (*A large number of Hon'ble Members rose*). It appears that a large number of Hon'ble Members are anxious to

(MR. SPEAKER.)

take part in the debate. The other day the Leader of the Opposition had asked me to allot one more day for the debate. There is no objection for taking three days for the debate, but we cannot sit beyond the 29 and so we have to accommodate ourselves within that time. If we can sit on Sunday and give up that holiday, then it is possible that we can have 3 days for the debate. I would like to know whether this proposition is agreeable to all.

AN HON'BLE MEMBER.—At least the week-end rest on Sunday is absolutely necessary.

Mr. SPEAKER.—Sometimes you will have to give it up. Otherwise, it is not possible to give three days for the debate.

Sri J. MOHAMED IMAM (Jagalur).—Since the 25th is a holiday I think we can sit on Sunday.

Mr. SPEAKER.—I think this is agreed by all sections of the House. I would like to know what is the opinion of Government.

*Sri M. V. RAMA RAO (Minister for Home affairs and Law).—Ordinarily, I should have had no objection to the proposal from the Chair that the House should sit on Sunday, but this Sunday is particularly inconvenient to many Hon'ble Members in the Treasury Benches on account of other engagements already fixed up. So I was wondering whether I should make a request to the Chair that instead of this Sunday, some other day might be chosen.

Mr. SPEAKER.—Then Tuesday is again a holiday. We can sit on that day.

Sri M. V. RAMA RAO.—The House cannot possibly sit on the 25th because it happens to be Christmas day and it would not be reasonable to suggest that the House should sit on that day.

Mr. SPEAKER.—If both Sunday the 23rd and Tuesday the 25th are not suitable, then there is no other day which can be allotted.

Sri M. V. RAMA RAO.—The House can sit for longer hours tomorrow.

Mr. SPEAKER.—I have no objection if we can sit for longer hours tomorrow.

*Sri J. MOHAMED IMAM.—According to the programme issued, today is the last day for the debate on the Address. Tomorrow we have other business according to the programme. If it is not possible to meet on any of these holidays, then it would be better if the session is extended by one day. We would be prepared to forgo our holiday, but it seems that the Ministers are not prepared to sit on the 25th. We also do not like to sit on the 25th, because it is an important Christian holiday and we have also got some Christian Members here.

Sri M. V. RAMA RAO.—I am one with Sri Imam that we should not sit on a holiday which is very auspicious to our Christian friends. Such a holiday occurs only once a year and so I would not suggest that the House should sit on that day. I was suggesting that if the Hon'ble Members on the other side of the House are agreeable to sit for longer hours tomorrow, then it could be managed without extending the session by one day. If that is not possible and if it is considered necessary that this debate should be carried on to an extent which would make it necessary to extend the session, then I submit that we want some more time to think about it and we shall make our suggestion later on. In the meanwhile the debate may proceed.

Mr. SPEAKER.—It is not possible for us to sit beyond Saturday the 29th. We have to adjust ourselves within the programme that we have issued. There are two alternatives for that. Either we can sit on any holiday or sit for longer hours on some days so that we may be able to finish the work. If Hon'ble Members are willing to sit for longer hours for a couple of days, then we need not cancel the holidays. We have somehow to make up 5 or 6 hours.

Sri J. MOHAMED IMAM.—Our request is that the period fixed for the debate should be extended by one day. So tomorrow should be taken up for discussion of the Address. After that, it is the look out of the Treasury Benches because it is all Government business thereafter. Let them manage it as they want and it is not our concern. We are concerned only with

having one more day for this debate; if they want us to sit longer by one hour for some days we have no objection to that.

Mr. SPEAKER.—It is not proper to say that we want one day more for the debate and then say the remaining business is the look out of the Treasury Benches. It is also my responsibility that I have to finish the whole agenda.

Sri B. HUTCHE GOWDA (Turuvekere).—They are not agreeable to our suggestion.

Mr. SPEAKER.—Of course, they have got their own difficulties. They are not obstructionists. Some Members of the Treasury Benches can be accommodated tomorrow. The Hon'ble Home Minister can speak tomorrow and he can go out on Sunday. If he has any engagement, it is not necessary that he should remain here on Sunday. The other Ministers who have no other outside work on Sunday may remain here.

Sri M. V. RAMA RAO.—I was not referring to any personal engagement of mine. In fact, it is exceedingly embarrassing for me to make any reference to our engagements outside the business of Government on the floor of this House. Ordinarily, I should not make any such reference here. I was really suggesting that if Hon'ble Members desire that the debate on the Motion of Thanks to the Governor for his Address to the joint session of the Legislature is to be carried on beyond today as originally scheduled, then it would be necessary for the House to sit for one day more and it is not possible to give that extra day on account of other matters on which we have no control. For instance, we have to attend the Indian National Congress at Indore. I am sure no Hon'ble Member of the Opposition will grudge our attending it. Unless we are free to depart for Indore on the 30th of this month, we shall not be in a position to attend it. Therefore, I was suggesting that it is not possible to extend the session by one day. Probably, Sir, you are not aware that this House generally sits in the morning on Saturdays.

Mr. SPEAKER.—I am aware of it.

Sri M. V. RAMA RAO.—On Saturdays it sits from 8-30 to 12-30. If Hon'ble Members are agreeable, we can sit for a couple of hours longer or have another short session in the afternoon, whichever suits them, so that we shall not be put to a situation of either extending the session by another day or of transacting other business than the business scheduled for the other days . . .

Mr. SPEAKER.—We can sit in the morning tomorrow and we can again meet in the evening also though it may not be for 5 hours. We may meet for 2 to 3 hours in the evening and then on Monday we can sit a little longer and on other days also if it is necessary we can sit a little longer.

Sri J. MOHAMED IMAM.—That seems to be the only inevitable course, though I do not agree with the Hon'ble Minister Sri M. V. Rama Rao that attending the Indore Session of Congress is part of the Government work.

Sri M. V. RAMA RAO.—I did not say that that is part of Government work.

Mr. SPEAKER.—But I am only concerned with the point whether my proposal is acceptable to all of you.

Sri J. MOHAMED IMAM.—Yes, Sir.

Mr. SPEAKER.—Then we will meet in the morning and also in the evening tomorrow and then decide.

Sri B. HUTCHE GOWDA.—Sir, I find that this Motion of Thanks has not been seconded at all.

Mr. SPEAKER.—It is not necessary to second this motion.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಗವರ್ನರ್‌ಅವರ ಭಾಷಣದ ಮೇಲೆ ತಂದಿರತಕ್ಕ ನಿರ್ಣಯವನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ ಮತ್ತು ಈ ನಿರ್ಣಯದ ಬಗ್ಗೆ ತಂದಿರತಕ್ಕ ತಿದ್ದುಪಡಿಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಗವರ್ನರ್ ಅವರ ಭಾಷಣವು ನಮ್ಮ ನೂತನ ರಾಜ್ಯಸ್ಥಾಪನೆಯಾದ ಮೇಲೆ ಉದ್ಭವಿಸಿರತಕ್ಕ ಪ್ರಮುಖವಾದ ಸಮಸ್ಯೆಗಳನ್ನೊಳಗೊಂಡು ಅವುಗಳು ತೃಪ್ತಿಕರವಾಗಿ ತೀರ್ಮಾನವಾಗುವ ಬಗ್ಗೆ ಕೆಲವು ಸಲಹೆಗಳನ್ನು ಒಳಗೊಂಡಿದೆ. ಅನೇಕ ವರ್ಷಗಳಿಂದ ಇದ್ದ ಕನ್ನಡ ಭಾಷೆಯನ್ನು ಮಾತನಾಡುವವರ ಬಯಕೆಯನ್ನು ಈಡೇರಿಸುವ ಒಂದು ಪ್ರತ್ಯೇಕವಾದ ರಾಜ್ಯವು ಸ್ಥಾಪನೆಯಾಗಿ ಕನ್ನಡ ಭಾಷೆಯನ್ನು ಮಾತನಾಡತಕ್ಕ ಐದು ಪ್ರದೇಶಗಳವರು ಒಡಗೂಡಿ ಪ್ರಜೆಗಳ ಯೋಗಕ್ಷೇಮವನ್ನು ನಿರ್ವಹಿಸತಕ್ಕ ಮೊದಲನೆ ಅವಕಾಶವು ಈಗ ಉಂಟಾಗಿದೆ. ಈ ಸಂದರ್ಭದಲ್ಲಿ ಈ ನೂತನ

(ಶ್ರೀ ಪಿ. ಆರ್. ರಾಮಯ್ಯ.)

ರಾಜ್ಯಕ್ಕೆ ಮೈಸೂರು ಎಂಬ ಹೆಸರನ್ನಿಟ್ಟಿರುವುದರಲ್ಲಿ ಒಂದು ಔಚಿತ್ಯವಿದೆ. ನೂತನ ರಾಜ್ಯದ ಅರ್ಧಕ್ಕಿಂತ ಹೆಚ್ಚಿನ ಪ್ರಜೆಗಳು ಮೈಸೂರಿನವರಾಗಿ ಸುವ್ಯವಸ್ಥಿತವಾದ ಆಡಳಿತ ಪದ್ಧತಿಯನ್ನು ಹೊಂದಿ ನವೀನವಾದ ರಾಜ್ಯ ಕ್ರಮಗಳನ್ನು ಅನುಸರಿಸಿ ಇದ್ದುದರಿಂದ ನಮ್ಮ ಪ್ರದೇಶದಲ್ಲಿ ಇದು ಮಾದರಿಯಾದ ಸಂಸ್ಥಾನ ಎಂಬ ಖ್ಯಾತಿಯನ್ನು ಪಡೆದಿದೆ. ಆ ಖ್ಯಾತಿಯನ್ನು ಮುಂದುವರಿಸಿ ನೂತನ ಸಮಸ್ಯೆಗಳನ್ನು ಎದುರಿಸುವುದಕ್ಕೆ ನೂತನ ರಾಜ್ಯಾಂಗ ವ್ಯವಸ್ಥೆಯಲ್ಲಿ ಅಡಕವಾಗಿರತಕ್ಕ ಕ್ರಮಗಳನ್ನನುಸರಿಸಿ ಪ್ರಥಮ ಪಾಂಚವಾರ್ಷಿಕ ಯೋಜನೆ ಮತ್ತು ದ್ವಿತೀಯ ಪಾಂಚವಾರ್ಷಿಕ ಯೋಜನೆ ಇವುಗಳನ್ನು ಕಾರ್ಯಗತ ಮಾಡುವುದರಲ್ಲಿ ಪ್ರಾಮುಖ್ಯವಾದ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಮೊದಲನೆಯದಾಗಿ ಉದ್ಭವಿಸಿರುವ ಸಮಸ್ಯೆ ಎಂದರೆ ಈ ಐದು ರಾಜ್ಯಗಳಿಂದ ಬಂದಿರುವ ಸರ್ಕಾರಿ ನೌಕರರನ್ನು ಒಟ್ಟುಗೂಡಿಸಿ ಒಂದೇ ಕಚೇರಿಯಲ್ಲಿ, ಕೆಲವು ಸಂದರ್ಭಗಳಲ್ಲಿ ಒಂದೇ ಮೇಜಿನ ಸುತ್ತಲೂ ಕೂಡಿಸಿ ಅವರ ಕೈಯಿಂದ ಒಂದೇ ವಿಧವಾದಂಥ, ಒಂದೇ ಪರಿಮಾಣದ ಕೆಲಸವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ, ವೈವಿಧ್ಯತೆಯಿಂದ ಕೂಡಿದ ಅತ್ಯಂತಭಿನ್ನತೆಯಿಂದ ಕೂಡಿದ ಸಂಬಳ ಸಾರಿಗೆಗಳು ಅವರಿಗೆ ಸಂದಾಯವಾಗುತ್ತಿರುವುದು ಮೊಟ್ಟ ಮೊದಲನೆಯದಾಗಿ ಯೋಚನೆ ಮಾಡತಕ್ಕ ವಿಷಯವಾಗಿದೆ. ಈ ನೂತನ ರಾಜ್ಯವು ಸ್ಥಾಪಿತವಾಗಿ ಸುಮಾರು ಒಂದೂವರೆ ತಿಂಗಳ ಮೇಲೆ ಆದಾಗ್ಯೂ ಈ ಸಮಸ್ಯೆಯ ಬಗ್ಗೆ ಯಾವ ಪರಿಹಾರವನ್ನೂ ಸರ್ಕಾರದವರು ತೆಗೆದುಕೊಂಡಿಲ್ಲ. ಒಂದೇ ಮೇಜಿನ ಸುತ್ತಲೂ, ಒಂದೇ ವಿಧವಾದ ಕೆಲಸಗಳನ್ನು ಒಂದೇ ಪರಿಮಾಣದಲ್ಲಿ ಮಾಡತಕ್ಕವರಿಗೆ ಇರತಕ್ಕ ವಿವಿಧ ಸಂಬಳಗಳನ್ನು ಪರಿಶೀಲಿಸಿ, ಈ ವಿವಿಧ ಸಂಬಳಗಳಿಂದ ಯಾವ ಮನಃಖೇದ ಉಂಟಾಗುತ್ತದೆ, ಕೆಲಸದ ದಕ್ಷತೆಯನ್ನು ತೆಗೆದುಕೊಂಡಲ್ಲಿ ಎಷ್ಟು ಕೊರತೆಯುಂಟಾಗುತ್ತದೆ ಎಂಬುದನ್ನು ಆಲೋಚಿಸಿ ತ್ವರಿತವಾದ ಕಾರ್ಯವನ್ನು ನಮ್ಮ ಸರ್ಕಾರದವರು ಕೈಗೊಳ್ಳಬೇಕಾಗಿದೆ. ಇದನ್ನು ನಿಧಾನವಾಗಿ ಆಲೋಚಿಸಿ ಪರಿಹರಿಸುತ್ತೇವೆಂದರೆ ಎಷ್ಟು ನಿಧಾನ ಮಾಡಿದರೆ ಅಷ್ಟರ ಮಟ್ಟಿಗೆ ಕೆಲಸದ ದಕ್ಷತೆಗೆ ಕೊರತೆಯುಂಟಾಗುತ್ತದೆ. ಈಗಾಗಲೇ ಈ ಅಸಮಾಧಾನದ ಬಗ್ಗೆ ಬೇಕಾದಷ್ಟು ಕೋರಿಕೆಗಳು, ಅರ್ಜಿಗಳು, ಸರ್ಕಾರಕ್ಕೆ ಬಂದಿವೆ. ಈ ಸಂಬಂಧವಾಗಿ ನಾನು ವೈಯಕ್ತಿಕವಾಗಿ ಕೆಲವು ಕಚೇರಿಗಳಿಗೆ ಹೋಗಿ ನೋಡಿದ್ದರಲ್ಲಿ ಒಂದೇ ಮೇಜಿನ ಸುತ್ತಲೂ ಕುಳಿತು ಒಂದೇತರಹ ಕೆಲಸವನ್ನು ಮಾಡತಕ್ಕವರಲ್ಲಿ ಒಬ್ಬರಿಗೆ 60 ರೂಪಾಯಿ, ಇನ್ನೊಬ್ಬರಿಗೆ 100 ರೂಪಾಯಿ, ಇನ್ನೊಬ್ಬರಿಗೆ 180 ರೂಪಾಯಿ ಮತ್ತೊಬ್ಬರಿಗೆ 250 ರೂಪಾಯಿ ಹೀಗೆ ಬರುತ್ತದೆಂದು ತಿಳಿದು ಬಂತು. ಕೆಲಸ ಒಂದೇ ರೀತಿಯಾಗಿದ್ದು ಸಂಬಳದಲ್ಲಿ ಈ ರೀತಿಯ ಭಿನ್ನತೆ ಇರುವುದು ಯಾವ ರೀತಿಯಾಗಿದೆ ಎಂದರೆ, ಒಂದೇ ಮಾತಿನಲ್ಲಿ ಹೇಳುವುದಾದರೆ, ಪಂಕ್ತಿಭೇದವೆಂದು ಹೇಳಬಹುದು. ಈ ಪಂಕ್ತಿ ಭೇದವನ್ನು ಆದಷ್ಟು ಬೇಗನೆ ಪರಿಹರಿಸದೆ ಹೋದರೆ ನಮ್ಮ ರಾಜ್ಯಕ್ಕೆ ಅದರಿಂದ ಬಹಳ ತೊಂದರೆ ಉಂಟಾಗುತ್ತದೆ. ಈ ಅಂಶವಾಗಿ ನಾನು ಮತ್ತೊಂದು ಅವಕಾಶದಲ್ಲಿ ಅಂಕಿ ಅಂಶಗಳೊಡನೆ ಈ ವಿಷಯವನ್ನು ಪ್ರತಿಪಾದಿಸುತ್ತೇನೆ. ಆದ್ದರಿಂದ ಈ ವಿಷಯವನ್ನು ಅಷ್ಟಕ್ಕೇ ಬಿಡುತ್ತೇನೆ.

ಗವರ್ನರ್‌ಅವರ ಭಾಷಣದ ಐದನೆಯ ಪ್ರಕರಣದಲ್ಲಿ ಕಾಸರಗೋಡು, ಮಡಕಶಿರ, ದಕ್ಷಿಣ ಷೋಲಾಪುರ, ಇವೇ ಮುಂತಾದ ಭಾಗಗಳಿಂದ ಕನ್ನಡಿಗರು ಹೊಸ ರಾಜ್ಯವನ್ನು ಸೇರಲು ಕಾತರರಾಗಿದ್ದಾರೆ; ಆ ಕಾತರತೆಯನ್ನು ನಿವಾರಿಸಿ ಅವರ ಆಶೋತ್ತರಗಳನ್ನು ಸಫಲಗೊಳಿಸಬೇಕಾಗಿದೆ ಎಂಬುದಾಗಿ ನಿರೂಪಿಸಿದೆ. ಆದರ ಇದೇ ಸಂದರ್ಭದಲ್ಲಿ ಹೊಸೂರಿನ ವಿಷಯವನ್ನು ಸಭೆಯ ಗಮನಕ್ಕೆ ತರಬೇಕಾಗಿತ್ತು. ಹೊಸೂರು ನಮ್ಮ ಬೆಂಗಳೂರಿಗೆ 25 ಮೈಲಿ ದೂರದಲ್ಲಿದೆ. ಅಲ್ಲಿ ಬಹುತೇಕ ಕನ್ನಡ ಮಾತನಾಡತಕ್ಕವರಿದ್ದಾರೆ. ಆ ಭಾಗದವರು ಮೈಸೂರಿನೊಂದಿಗೆ ಸೇರಲು ಇಚ್ಛಿಸುತ್ತಾರೆಂದು, ಅಲ್ಲಿಂದ ಅನೇಕರು ಬಂದು ಹಸ್ತ ಪತ್ರಿಕೆಗಳನ್ನು ಈ ಸಭೆಯ ಸದಸ್ಯರಿಗೆ ಹಂಚಿದ್ದಾರೆ. ಇದರಲ್ಲಿ ಒಂದು ಆಶ್ಚರ್ಯಕರವಾದ—ಶೋಚನೀಯವಾದ ಎಂದು ಹೇಳುವುದಿಲ್ಲ—ಪ್ರಸಂಗವೆಂದರೆ ಈ ಹೊಸೂರನ್ನು ಮದರಾಸು ಸರ್ಕಾರದವರು ಮತ್ತು ಆಂಧ್ರ ಸರ್ಕಾರದವರು ನಮಗೆ ಸೇರಿದ್ದು, ನಮಗೆ ಸೇರಿದ್ದು ಎಂದು ತಮ್ಮ ತಮ್ಮೊಳಗೇ ವ್ಯಾಜ್ಯವನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆಂಬ ಸಂಗತಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದರೆ ನಮ್ಮ

3-30 P. M.

ಈ ನೂತನ ಮೈಸೂರು ಸರ್ಕಾರದವರು ಹೊಸೂರಿನ ವಿಷಯವಾಗಿ ಯಾವ ನೀತಿಯನ್ನು ಅನುಸರಿಸುತ್ತಿದ್ದಾರೆ ಮತ್ತು ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಎಂಬ ಈ ವಿಷಯದಲ್ಲಿ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೇನೆ. ಇಷ್ಟರಲ್ಲೇ ಅದಕ್ಕೆ ಉತ್ತರ ಬರಬಹುದು. ಹೊಸೂರಿನಲ್ಲಿರುವ ಕನ್ನಡಿಗರು ಈ ನೂತನ ಮೈಸೂರು ದೇಶಕ್ಕೆ ಸೇರಬೇಕೆಂದು ಕೋರಿದ್ದಾರೆ. ಈಗ ಮದರಾಸು ಮತ್ತು ಆಂಧ್ರ ಸರ್ಕಾರದವರು ಈ ಹೊಸೂರಿನ ಸಮಸ್ಯೆಯನ್ನು ತಮ್ಮ ತಮ್ಮೊಳಗೇ ಬಗೆಹರಿಸಿಕೊಂಡು ಕನ್ನಡ ಪ್ರಾಂತವಾದ ಮೈಸೂರಿಗೆ ಸೇರಿಸಲು ಉದಾಸೀನ ಮಾಡದೆ ಬೇಗನೆ ಕ್ರಮಗಳನ್ನು ತೆಗೆದುಕೊಂಡರೆ ಉತ್ತಮ. ಆದ್ದರಿಂದ ಈ ಹೊಸೂರಿನ ವಿಷಯದಲ್ಲಿ ಇಂಡಿಯಾ ಸರ್ಕಾರಕ್ಕೆ ಮೈಸೂರು ಸರ್ಕಾರದವರು ತಿಳಿಸಿ, ಮದರಾಸು ಮತ್ತು ಆಂಧ್ರ ಸರ್ಕಾರದವರಿಗೂ ಮೈಸೂರು ಸರ್ಕಾರದವರಿಗೂ ಈ ಸಮಸ್ಯೆಯ ಪರಿಹಾರದ ವಿಷಯದಲ್ಲಿ ಬೇಗ ಅವಕಾಶವನ್ನು ಕಲ್ಪಿಸಿ ಒಂದು ತೃಪ್ತಿಕರವಾದ ತೀರ್ಮಾನಕ್ಕೆ ಬರಬೇಕೆಂದು ನಾನು ಕೇಳುತ್ತೇನೆ.

ಸ್ವಾಮಿ, ಈ ನೂತನ ರಾಜ್ಯ ಸ್ಥಾಪಿತವಾದ ಮೇಲೆ ಯಾವ ರೀತಿಯಾಗಿ ಈ ಸರ್ಕಾರದಲ್ಲಿ ಕೆಲಸ ನಡೆಯುತ್ತಿದೆ ಮತ್ತು ನೂತನವಾಗಿ ಬಂದಿರತಕ್ಕ ಅಗಾಧವಾದ ಸಮಸ್ಯೆಗಳನ್ನು ಈ ನಮ್ಮ ಸರ್ಕಾರದ ಯಂತ್ರ ಎದುರಿಸಿ ಬಗೆ ಹರಿಸಲು ಸಾಧ್ಯವಾಗಿದೆಯೇ ಎಂಬುದನ್ನು ಸ್ವಲ್ಪ ಈ ಸಭೆಯ ಗಮನಕ್ಕೆ ತಂದುಕೊಳ್ಳಬೇಕು. ಈಗ ಐದು ಪ್ರದೇಶಗಳ ಸರ್ಕಾರ ಹೋಗಿ ಒಂದು ಸರ್ಕಾರವಾಗಿ ರೂಪುಗೊಂಡು ಕೆಲಸ ಮಾಡುವಾಗ ಅನೇಕ ಸಮಸ್ಯೆಗಳು ಬರುವುದು ಸಹಜ. ಕೆಲವು ಪ್ರದೇಶಗಳಲ್ಲಿ ಹಣ ವಸೂಲು ಮಾಡತಕ್ಕ ರೀತಿಯೇ ಬೇರೆ. ಮತ್ತು ಅನೇಕ ಕಾನೂನುಗಳು ಬೇರೆ ಬೇರೆ ಭಾಗಗಳಲ್ಲಿ ಬೇರೆಬೇರೆ ರೀತಿಯಾಗಿವೆ. ಇವುಗಳನ್ನೆಲ್ಲ ಒಂದುಗೂಡಿಸಿ ಒಂದು ಕಾನೂನಾಗಿ ಮಾರ್ಪಡಿಸುವುದರಲ್ಲಿ ಸರ್ಕಾರವು ಎಷ್ಟರಮಟ್ಟಿಗೆ ಪ್ರಯತ್ನಿಸಬೇಕೆಂಬುದನ್ನು ಗಮನಿಸಬೇಕಾಗಿದೆ. ಒಂದು ದೊಡ್ಡ ವಿಷಯವೇನೆಂದರೆ, ಇವೊತ್ತು ಪ್ರಜೆಗಳಿಗಾಗಿ ಈ ಸರ್ಕಾರದ ಯಂತ್ರ ಯಾವ ರೀತಿಯಾಗಿ ಕೆಲಸ

ಮಾಡುತ್ತಿದೆ, ಯಾವ ಯಾವ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬ ವಿಷಯಗಳನ್ನು ಸಮಾನ್ಯ ಜನಗಳು ತಿಳಿದುಕೊಳ್ಳುವುದಕ್ಕೆ ಅವಕಾಶ ವಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಪ್ರಜೆಗಳಿಂದ ಬಂದ ಕಾಗದಕ್ಕೆ ಸರಿಯಾದ ಉತ್ತರವೂ ಕೂಡ ಬರು ವುದಿಲ್ಲ. ಆದುದರಿಂದ ಸರ್ಕಾರ ಏನು ಕೆಲಸ ಮಾಡು ತ್ತಿದೆ, ಯಾವ ರೀತಿಯಾಗಿ ಕಾನೂನು ಮಾಡುತ್ತಿದೆ, ಯಾವ ಕ್ರಮ ಅನುಸರಿಸುತ್ತಿದೆ ಇವೇ ಮೊದಲಾದ ವಿಷಯಗಳು ಪ್ರಜೆಗಳಿಗೆ ತಿಳಿಯಬೇಕು. ಈಗ ಈ ಐದು ಬೇರೆಬೇರೆ ರಾಜ್ಯಗಳು ಸೇರಿರತಕ್ಕ ಈ ಕಾಲದಲ್ಲಿ ಇವುಗಳನ್ನೆಲ್ಲ ಸಂಘಟಿಸಿ ಒಂದು ತೃಪ್ತಿಕರವಾದ ಕೈಪಿಡಿಯ ರೂಪದಲ್ಲಿ ಸರ್ಕಾರದವರು ಪ್ರಜೆಗಳಿಗೆ ಒದಗಿಸಿಕೊಡಬೇಕು. ಇದು ಅತ್ಯಂತ ಅವಶ್ಯಕ ವಾದ ವಿಷಯ. Helper ಗಳನ್ನು ಸಹಾಯಕ್ಕೆ ಕೊಡುವಂತೆ ಮಾಡಿ ಪ್ರಜೆಗಳು ತಮ್ಮ ಕುಂದು ಕೊರತೆಗಳನ್ನು ಈಡೇರಿಸಿಕೊಳ್ಳಲು ಅವ ಕಾಶ ಮಾಡಿಕೊಡಬೇಕು. ಈಗ ಸರ್ಕಾರದ ಯಂತ್ರ ಬಹಳ ಸಂಕೀರ್ಣವಾಗಿದೆ. ಈ ಸಂಕೀರ್ಣತೆಯಿಂದ ಸಾಮಾನ್ಯ ಜನಗಳಿಗೆ ಬಹಳ ಕಷ್ಟವಾಗಿದೆ. ಆದುದ ರಿಂದ ಇಂತಹ ಕಷ್ಟಗಳನ್ನು ಪರಿಹರಿಸಿಕೊಳ್ಳುವುದ ಕ್ಕಾಗಿ ಪ್ರಜೆಗಳಿಗೆ ಅವಕಾಶ ಮಾಡಿಕೊಡುವುದು ಅಗತ್ಯ. ಈಗ ಯಾವ ರೀತಿಯಾಗಿ ಓಟುಗಳನ್ನು ತೆಗೆ ದುಕೊಳ್ಳಲು ಹೋಗುತ್ತೇವೆಯೋ ಹಾಗೆ ಈ ಸರ್ಕಾರದ ವಿಷಯಗಳನ್ನೂ ಅವರಿಗೆ ತಿಳಿಯುವಂತೆ ತಿಳಿಸಬೇಕು. ಈ ರೀತಿಯಾದ ಒಂದು ಸುಲಭವಾದ ಪದ್ಧತಿಯನ್ನು ನಾವು ಏರ್ಪಾಡು ಮಾಡಬೇಕು.

ಏಳನೆಯ ಪ್ರಕರಣದಲ್ಲಿ ಈ ನೂತನ ರಾಜ್ಯದ ವಿಸ್ತೀರ್ಣ 73.189 ಚದರ ಮೈಲಿಗಳು ಮತ್ತು ಜನ ಸಂಖ್ಯೆ 192 ಲಕ್ಷ ಎಂಬುದಾಗಿದೆ. ಮತ್ತು ಪಾಂಚ ವಾರ್ಷಿಕ ಯೋಜನೆಯ ವಿಷಯವಾಗಿ ಕೆಲವು ವಿವರ ಗಳನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲಿ ಮುಖ್ಯವಾದ ವಿಷಯವನ್ನು ನಾವು ತಿಳಿದುಕೊಳ್ಳಬೇಕಾಗಿತ್ತು. ನೂತನ ರಾಜ್ಯದ ಅಂದಾಜು ಎಷ್ಟು, ಅಂದರೆ Revenue, ಮತ್ತು Expenditure ಎಷ್ಟಾ ಗುತ್ತದೆ ಎಂಬ ಮುಖ್ಯ ವಿಷಯಗಳನ್ನು ಕೊಡ ಬೇಕೆಂದು ಕೇಳುತ್ತೇನೆ. ಈಗ ಇದರ Revenue ಮತ್ತು Expenditure ಎಷ್ಟು ಎಂಬುದು ಒಂದು ದೊಡ್ಡ ಮೊದಲನೆಯ ಪ್ರಶ್ನೆ. ಇದರ ವಿಷಯ ವಾಗಿ ನಾನು ಪ್ರಶ್ನೆ ಕಳುಹಿಸಿದ್ದೇನೆ. ಉತ್ತರ ಇನ್ನೂ ಬರುವುದರಲ್ಲಿದೆ. ನವಕನ್ನಡ ರಾಜ್ಯದ ಒಂದು ಅಂದಾಜು ಮಾಡಬೇಕು. ಸುಮಾರು ನಮ್ಮ ಹೊಸ ರಾಜ್ಯಕ್ಕೆ ಹಣ 36 ಕೋಟಿಯಿಂದ 40 ಕೋಟಿ ಯವರೆಗೆ ಮತ್ತೆ ಖರ್ಚು ಇನ್ನೂ ಹೆಚ್ಚಾಗಬೇಕು. ಈ ವಿಷಯವನ್ನು ನಮ್ಮ Finance Minister ತಮ್ಮ ಭಾಷಣದಲ್ಲಿ ಏಳನೇ ಪ್ರಕರಣದಲ್ಲಿ ಸೇರಿಸಿದ್ದರೆ ಜನಗಳಿಗೆ ಬಹಳ ಉಪಕಾರವಾಗುತ್ತಿತ್ತು. ಇದು ಎಲ್ಲಿಯೂ ಕೊಡದಿರುವುದು ಅನುಮಾನಕ್ಕೆ ಅವಕಾಶ ಕೊಟ್ಟಿದೆ.

ಎಂಟನೆಯ ಪ್ರಕರಣ Communications and Transport, Communications ಮತ್ತು Transport ಈಗ Nationalise ಆಗಿ ಬಿಟ್ಟ ಮೇಲೆ ಇದು ಇನ್ನೂ ಹೆಚ್ಚು ಸಮಂಜಸವಾಗಿ ನಡೆ ಯಬೇಕಾಗುತ್ತದೆ. ಆದರೆ ಒಂದು ಸಂತೋಷದ ವಿಷಯವನ್ನು ನಾನು ಹೇಳಬೇಕಾಗಿದೆ. ಈಚೆಗೆ ಸುಮಾರು ಒಂದು ತಿಂಗಳಿಂದಲೂ ನಾವು ಬಸ್ಸುಗಳಲ್ಲಿ ಓಡಾಡುವಾಗ ಒಂದು ಪ್ರಶ್ನೆ ಕೇಳುತ್ತಿದ್ದೆವು; ಏನಾದರೂ overloading ಇದೆಯೇ ಎಂದು. ಈಗ overloading ಮೈಸೂರು ಸಂಸ್ಥಾನದಲ್ಲಿ ಬಹು ಮಟ್ಟಿಗೆ ಕಡಿಮೆಯಾಗುತ್ತಾ ಬಂದಿದೆ ಎಂದು ತಿಳಿ ಯಿತು. ಆದರೆ ಈಗ ಬೆಂಗಳೂರು ನಗರದಲ್ಲಿ ಈ ಬಸ್ಸುಗಳು ಸಾಕಾದಷ್ಟಿಲ್ಲ. ಎಷ್ಟು ಬಸ್ಸು ಗಳು ಬೇಕೋ ಅಷ್ಟು ಬಸ್ಸುಗಳು ಇಲ್ಲದಿರು ವುದರಿಂದ ಜನರಿಗೆ ತುಂಬ ತೊಂದರೆಯಾಗಿದೆ. ಈ ವಿಷಯವನ್ನು ಈ ಸಭೆಯಲ್ಲಿಯೂ ಮತ್ತು ಹಿಂದಿನ ಸಭೆಯಲ್ಲಿಯೂ ಎಷ್ಟೋ ಸಾರಿ ಸರ್ಕಾರದ ಗಮನಕ್ಕೆ ತಂದರೂ ಕೂಡ ಏನೂ ಪ್ರಯೋಜನವಾಗಲಿಲ್ಲ. ಈಗ ಬಸವನಗುಡಿಯಲ್ಲಿ ಸುಮಾರು ಬೆಳಗ್ಗೆ ಒಂಭತ್ತು ಗಂಟೆ ಹೊತ್ತಿನಲ್ಲಿ ಬಂದರೆ ಅಲ್ಲಿ ಸುಮಾರು ಎರಡು ಫರ್ಲಾಂಗಿಗಿಂತಲೂ ಹೆಚ್ಚು ದೂರ ಜನಗಳು ಕ್ಯೂ ನಿಂತಿರುವುದು ಕಂಡು ಬರುತ್ತದೆ. ಮತ್ತು ಅದೇ ಸಮಯದಲ್ಲಿ ಹೆಚ್ಚು ಮಕ್ಕಳು ಕಾಲೇಜು, ಸ್ಕೂಲು ಗಳಿಗೆ ಹೋಗಲು ಕಾದಿರುತ್ತಾರೆ. ಅಲ್ಲದೆ ಸರ್ಕಾರಿ ಕೆಲಸ ಕಾರ್ಯಗಳಿಗೆ ಹೋಗುವ ನೌಕರರೂ ಕೂಡ ಸುಮಾರು ಎರಡು ಮೂರು ಗಂಟೆಗಳಿಂದ ಬಸ್ಸಿಗಾಗಿ ಕಾಯಬೇಕಾಗುತ್ತದೆ. ಅವರಿಗೆ ಈ ಒಂದು ಬಸ್ಸಿ ಗಾಗಿ ಈ ರೀತಿ ತೊಂದರೆಗಳಾಗುತ್ತವೆ. ಇದಕ್ಕೆ ಹೆಚ್ಚು ಬಸ್ಸುಗಳಿಲ್ಲದಿರುವುದೇ ಕಾರಣ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಹಾಕಬೇಕು. ನಾನು ಈ ವಿಷಯದಲ್ಲಿ ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತೇನೆ. ಈಗ ಹಿಂದೂಸ್ಥಾನದ Aircraft Factory ಯವರು ಪ್ರತ್ಯೇಕವಾಗಿ ಬಸ್ಸು ಮಾಡಿ ಕೊಂಡಿದ್ದಾರೆ. ಅದೇ ರೀತಿ Telephone Factory ಯವರೂ ಪ್ರತ್ಯೇಕವಾದ ಬಸ್ಸುಗಳನ್ನು ಮಾಡಿದ್ದಾರೆ. ಅದೇ ರೀತಿ ಸರ್ಕಾರದಲ್ಲಿ ಕೆಲಸ ಮಾಡುವ ಸಾವಿರಾರು ನೌಕರರಿಗಾಗಿ ಒಂದು ಪ್ರತ್ಯೇ ಕವಾದ ಬಸ್ಸು ಏರ್ಪಾಡು ಮಾಡಬೇಕು. ಅವು ಈ ಕಾಲದಲ್ಲಿ ಅಂದರೆ Peak Hours ನಲ್ಲಿ ಹೋಗುವ ಬಸ್ಸುಗಳಾಗಿರಬೇಕು. ಎರಡನೆಯದು ಕಾಲೇಜು ಮತ್ತು ಹೈಸ್ಕೂಲುಗಳ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ಬಸ್ಸುಗಳು ಇರಬೇಕು. ಈಗ ಈ ರೀತಿಯಾದ ಬಸ್ಸು ಸೌಕರ್ಯಗಳಿಲ್ಲ. ಕಾಲಕ್ರಮದಲ್ಲಿಯಾದರೂ ಈ ಕಾಲೇಜು ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕವಾದ ಬಸ್ಸುಗಳನ್ನು ಏರ್ಪಾಡು ಮಾಡತಕ್ಕದ್ದು ಅವಶ್ಯಕ ವಾಗಿದೆ.

ಗ್ರಾಮಾಂತರ ಪ್ರದೇಶಗಳಿಗೆ ಓಡತಕ್ಕ ಬಸ್ಸುಗಳ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಹತ್ತಿರ ಹತ್ತಿರದಲ್ಲಿ ಕೆಲವು ನಿಲ್ದಾಣಗಳನ್ನು ಏರ್ಪಾಡುಮಾಡು ವುದು ಅವಶ್ಯಕ. ಊರುಗಳ ಹತ್ತಿರ ಮಾಡಿರುತ್ತಾರೆ. ಮಧ್ಯೆ ಮಧ್ಯೆ ಮಳೆ ಅಥವಾ ಬಿಸಿಲು ಜಾಸ್ತಿಯಾಗಿದ್ದು ಜನಗಳು ನಿಂತುಕೊಳ್ಳಬೇಕಾದ ಸಂದರ್ಭದಲ್ಲಿ ಇವು ಅತ್ಯಗತ್ಯ. ಪೂರ್ವಕಾಲದಲ್ಲಿ ಮಾಡುತ್ತಾ ಇದ್ದರು. ಪೂರ್ವಕಾಲದಲ್ಲಿ ಗಿಡಗಳಿದ್ದವು. ಈಗ ಗಿಡಗಳೆಲ್ಲಾ ಹೋಗುತ್ತಾ ಇವೆ. ಆದ್ದರಿಂದ ಮಧ್ಯೆ ಮಧ್ಯೆ ಈ ನಿಲ್ದಾಣಗಳನ್ನು ಎಂದರೆ Bus Sheltersನ್ನು ಏರ್ಪಾಡು ಮಾಡುವುದು ಅವಶ್ಯಕ.

ಹತ್ತನೆಯ ಪ್ರಕರಣದಲ್ಲಿ 1,500 ಜನ ಸರ್ಕಾರಿ ನೌಕರರು ಬೆಂಗಳೂರಿಗೆ ಹೊಸದಾಗಿ ಬಂದಿದ್ದಾರೆ ಆಗುತ್ತದೆ ಎಂದು ಹೇಳಿದ್ದೀರಿ. ಅವರ ಸಂಖ್ಯೆ ಅದಕ್ಕಿಂತ ಬಹಳ ಜಾಸ್ತಿ ಆಗುತ್ತದೆ ಅದು ಹೇಗೆಂದರೆ ಆ ಸಂಖ್ಯೆಗೆ 5 ರಷ್ಟು ಸೇರಿಸಬೇಕು. ಪ್ರತಿಯೊಂದು ಮನೆಯಲ್ಲೂ ಕಡೆಪಕ್ಷ 5 ಜನ ಇರು ತ್ತಾರೆ. ಸುಮಾರು 7,500 ರಿಂದ ಹತ್ತು ಸಾವಿರ ದಷ್ಟು ಜನಸಂಖ್ಯೆ ಜಾಸ್ತಿಯಾಗುತ್ತದೆ. ಅಷ್ಟು ಜನ ಬೆಂಗಳೂರಿಗೆ ಬಂದಿದ್ದಾರೆ. ಅವರಿಗೆ ಮನೆಗಳನ್ನು

(ಶ್ರೀ ಪಿ. ಆರ್. ರಾಮಯ್ಯ.)

ದೊರಕಿಸಿಕೊಡುವ ಬಗ್ಗೆ ಈಗ ಸ್ವಲ್ಪ ಮಟ್ಟಿಗೆ ಏರ್ಪಾಡು ಮಾಡುತ್ತಾ ಇದ್ದಾರೆ. ಆದರೆ ಇದು ತೃಪ್ತಿಕರವಾಗಿಲ್ಲ. ಈ ಬೆಂಗಳೂರಿನಲ್ಲಿ ಮನೆಗಳ ಕೊರತೆ ಬಹಳವಾಗಿದೆ. ಅದನ್ನು ಬೇಗನೆ ತೃಪ್ತಿಕರವಾಗಿ ಬಗೆಹರಿಸಬೇಕು. ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿರತಕ್ಕ ಸ್ಲಂ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇದನ್ನು ಈ ಸಭೆಯಲ್ಲಿ ಹಿಂದೆ ಎಷ್ಟೋ ಆವರ್ತಿ ತಿಳಿಸಿದೆ. ಈ ಸ್ಲಂಗಳನ್ನು ತೆಗೆದುಹಾಕಿ ಆ ಜಾಗದಲ್ಲಿ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿದ್ದೇವೆ. ಮೊನ್ನೆ ದಿವಸ ಮದರಾಸಿನ ಮುಖ್ಯಮಂತ್ರಿ ಕಾಮರಾಜ ನಾಡಾರ್‌ಅವರು ಮೈಸೂರಿಗೆ ಬಂದಿದ್ದು ಮುನಿಸಿಪಾಲಿಟಿಯವರು ಮಾನ ಪತ್ರ ಸಮರ್ಪಿಸಿದಾಗ ತಮಿಳಿನಲ್ಲಿ ಭಾಷಣಮಾಡಿದರು. ಆ ಭಾಷಣದಲ್ಲಿ ಏನು ಹೇಳಿದರು ಎಂದರೆ, '' ಮನೆಕಟ್ಟುವ ವಿಷಯದಲ್ಲಿ ಅನೇಕ ದೊಡ್ಡ ದೊಡ್ಡ ಸ್ಕೀಂಗಳನ್ನು ಹಾಕಿದ್ದೇವೆ, ಆ ಸ್ಕೀಂ ಒಂದೂ ಜಾರಿ ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಬಹಳ ಹಣ ಬೇಕಾಗುತ್ತದೆ. ಆದ್ದರಿಂದ ನಾವು ಅಷ್ಟು ಭಾರಿ ಭಾರಿಯಾದ ಸ್ಕೀಂಗಳನ್ನು ಹಾಕಿಕೊಳ್ಳದೇ ಯಾವುದು ಸಾಧ್ಯವೋ, ಯಾವುದು ವ್ಯವಹಾರದಲ್ಲಿ ಸಾಧ್ಯವಾಗುತ್ತದೆಯೋ ಅಂಥಾದ್ದನ್ನು ಮಾಡಿಕೊಂಡು ಮುಂದುವರಿಯಬೇಕು. ಆ ಸ್ಲಂಗಳಲ್ಲಿ ವಾಸಮಾಡತಕ್ಕ ಜನಗಳು ಆ ಜಾಗಗಳನ್ನು ಬಿಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಒತ್ತಾಯವಾಗಿ ಬೇರೆ ಕಡೆಗೆ ಅವರನ್ನು ಸಾಗಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅವರು ಇರುವ ಕಡೆಯಲ್ಲೇ ನೀರು ವಸತಿ, ನೈರ್ಮಲ್ಯದ ಏರ್ಪಾಡು ಮಾಡಬೇಕು ಎಂದು ಸಲಹೆ ಕೊಟ್ಟರು. ಆದ್ದರಿಂದ ನಾವು ಸ್ಲಂಕ್ಲಿಯರೆನ್ಸ್ ವಿಷಯದಲ್ಲಿ ತುರ್ತಾಗಿ ಆಲೋಚನೆ ಮಾಡಬೇಕಾಗುತ್ತದೆ. ಆ ಜನಗಳಿಗೆ ನೀರು, ವಸತಿ, ನೈರ್ಮಲ್ಯದ ಏರ್ಪಾಡು ಇವುಗಳನ್ನೆಲ್ಲಾ ಮಾಡಬೇಕು. ಇಲ್ಲದೇ ಹೋದರೆ ಅವರ ಸುತ್ತಮುತ್ತಲೂ ಇರತಕ್ಕ ಪ್ರಜೆಗಳ ಆರೋಗ್ಯ ಕೆಡುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ತಿಳಿಸಬೇಕಾಗಿದೆ.

ಹದಿಮೂರನೆಯ ಪ್ಯಾರಾದಲ್ಲಿ ಕೋಲಾರದ ಚಿನ್ನದ ಗಣಿಯ ರಾಷ್ಟ್ರೀಕರಣದ ಸಂಬಂಧವಾಗಿ ಕೈಗೊಂಡಿರತಕ್ಕ ನೂತನ ಏರ್ಪಾಡನ್ನು ತಿಳಿಸಿದ್ದೀರಿ. ದಿವಾನ್ ಶೇಷಾದ್ರಿ ಅಯ್ಯರ ಕಾಲದಲ್ಲಿ ಎಂದರೆ ಈ ಗಣಿಗಳನ್ನು ಆ ಬ್ರಿಟಿಷ್ ಕಂಪೆನಿಗೆ ವಹಿಸಿದ ಕಾಲದಲ್ಲಿ 'ಈ ರೀತಿ ವಹಿಸಿದ್ದು ಸರಿಯಲ್ಲ ಇದನ್ನು ನ್ಯಾಷನಲೈಸ್ ಮಾಡಬೇಕು' ಎಂದು ದಾದಾಭಾಯಿ ನವರೋಜಿಯವರು ಸಲಹೆ ಕೊಟ್ಟಿದ್ದರು. ನಾವೇ ನಡೆಸಿಕೊಂಡು ಬರಬೇಕು. ಒಂದು ವೇಳೆ ನಡೆಸುವುದಕ್ಕೆ ಸಾಧ್ಯವಾಗದಿದ್ದಾಗ್ಯೂ ಕೂಡ ಪರದೇಶದ ಕಂಪೆನಿಗಳಿಗೆ ಅವನ್ನು ಕೊಡಕೂಡದು ಎಂದು ಹೇಳಿದ್ದಾರೆ. ಅನೇಕ ವರ್ಷಗಳಾದ ಮೇಲೆ ಈಗ ಅದನ್ನು ನಮ್ಮ ಸರ್ಕಾರದವರು ವಹಿಸಿರತಕ್ಕದ್ದು ತೃಪ್ತಿಕರವಾಗಿದೆ. ಆದರೆ ಈ ಬೋರ್ಡ್ ಆಫ್ ಮ್ಯಾನೇಜ್‌ಮೆಂಟನ್ನು ಪುನಃ ಜಾನ್ ಟೈಲರ್ ಕಂಪೆನಿಯವರಿಗೇ ವಹಿಸಿರುವುದು ಸಾಧುವಾದದ್ದೋ ಅಲ್ಲವೋ ಎಂಬುದು ನನಗೆ ಸಂದೇಹವಾಗಿದೆ. ಜಾನ್‌ಟೈಲರ್ ಕಂಪೆನಿಯವರಿಗೆ ಅದನ್ನು ವಹಿಸಿದ್ದೀರಿ. ಆದಷ್ಟು ಜಾಗ್ರತೆ ಅವರಿಂದ ಅದನ್ನು ತಪ್ಪಿಸಿ ನಮ್ಮ ಜನಗಳಿಂದಲೇ ಆ ಗಣಿಯ ಕೆಲಸವನ್ನು ಮಾಡಿಸುವ ಏರ್ಪಾಡು ಮಾಡತಕ್ಕದ್ದು ಅತ್ಯಂತ ಅವಶ್ಯಕ ಎಂಬುದಾಗಿ ಅಷ್ಟುಮಾತ್ರ ತಿಳಿಸುತ್ತೇನೆ.

ಹದಿನಾರನೆಯ ಪ್ರಕರಣದಲ್ಲಿ ವಿಶ್ವವಿದ್ಯಾನಿಲಯದ ವಿಷಯವನ್ನು ಪ್ರಸ್ತಾಪಮಾಡಿದ್ದೀರಿ. ಈಗ ನಮ್ಮ ಮೈಸೂರಿನಲ್ಲಿ ಎರಡು ವಿಶ್ವವಿದ್ಯಾನಿಲಯಗಳಿವೆ. ಒಂದು ಮೈಸೂರು ವಿಶ್ವವಿದ್ಯಾನಿಲಯ, ಎರಡನೆಯದು ಕರ್ನಾಟಕ ವಿಶ್ವವಿದ್ಯಾನಿಲಯ. ಇವು ಪ್ರತ್ಯೇಕ ಪ್ರತ್ಯೇಕವಾಗಿ ಒಂದು ಪದ್ಧತಿಯನ್ನನುಸರಿಸಿಕೊಂಡು ನಡೆದು ಬರುತ್ತಾ ಇವೆ. ಆದರೆ ಇವುಗಳನ್ನೆಲ್ಲಾ ಒಟ್ಟುಗೂಡಿಸಿ ಒಂದೇ ರೀತಿಯಾಗಿ ಒಂದಕ್ಕೆ ಒಂದು ಸಮನ್ವಯದಿಂದ ಮತ್ತು ಸಹಕಾರದಿಂದ, ಸಂಯೋಜನೆಯಿಂದ ಕೆಲಸ ಮಾಡುವುದಕ್ಕೆ ಆಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈ ಪ್ರಕರಣದಲ್ಲಿ ಪ್ರೊಫೆಷನಲ್ ಎಜ್ಯುಕೇಷನ್ನಿಗೆ ಸಂಬಂಧಪಟ್ಟಿರತಕ್ಕ ಒಂದು ಸಮಸ್ಯೆಯನ್ನು ಗವರ್ನರ್‌ಅವರು ಪ್ರಸ್ತಾಪಮಾಡಿದ್ದಾರೆ. ನಮ್ಮ ಬೆಂಗಳೂರಿನಲ್ಲಿ ಎರಡು ಇಂಜನಿಯರಿಂಗ್ ಕಾಲೇಜುಗಳಿವೆ. ಇಲ್ಲಿ ಸಿಲ್ವರ್ ಜ್ಯೂಬಿಲಿ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟು ಇದೆ. ಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟು ಇದೆ. ಅಗ್ರಿಕಲ್ಚರಲ್ ಕಾಲೇಜು, ಕಾಮರ್ಸ್ ಕಾಲೇಜು ಇವೆರಡೂ ಇವೆ. ಮೈಸೂರಿನಲ್ಲಿ ಆರ್ಟ್ಸ್‌ಗೆ ಸಂಬಂಧವಾದ ಮತ್ತು ಸೈನ್ಸ್‌ಗೆ ಸಂಬಂಧವಾದ ಕಾಲೇಜುಗಳಿವೆ. ಅಲ್ಲಿ ಆಯುರ್ವೇದದ ಕೋರ್ಸು ಇವೆ. ಬಳ್ಳಾರಿಯಲ್ಲಿ ಪಾಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಇದೆ. ಅದೂ ಕೂಡ ನಮಗೆ ಸೇರಿದೆ. ಈಗ ಉತ್ತರ ಕರ್ನಾಟಕದಲ್ಲಿ ಎಷ್ಟು ಇಂಜನಿಯರಿಂಗ್ ಕಾಲೇಜುಗಳಿವೆ ಎಂಬುದು ನನಗೆ ಚೆನ್ನಾಗಿ ಗೊತ್ತಿಲ್ಲ. ಆದರೆ ಈ ಭಾಷಣದಲ್ಲಿ ತಿಳಿಸಿರುವುದನ್ನು ನೋಡಿದರೆ ಅಲ್ಲಿರತಕ್ಕ ಇಂಜನಿಯರಿಂಗ್ ಕಾಲೇಜು ಮತ್ತು ಬೇರೆ ಸಂಸ್ಥೆಗಳಲ್ಲಿ ಶಿಕ್ಷಣಕ್ಕೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಸಾಕಾದಷ್ಟು ಅವಕಾಶವಿಲ್ಲ. ಆದ್ದರಿಂದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಎಂದರೆ ಮದರಾಸು, ಬೊಂಬಾಯಿ ಮತ್ತು ಆಂಧ್ರದಲ್ಲಿ ಹಿಂದೆ ಯಾವ ರೀತಿ ಅವಕಾಶ ಇತ್ತೋ ಅದೇ ರೀತಿ ದೊರೆಯಬೇಕೆಂದು ಹೇಳಿದ್ದಾರೆ. ಇದನ್ನು ಕಾರ್ಯಗತ ಮಾಡುವುದಕ್ಕೆ ಯಾರನ್ನಾದರೂ ಒಬ್ಬರು ಅಧಿಕಾರಿಗಳನ್ನು ನೇಮಕ ಮಾಡಬೇಕು. ವಿದ್ಯಾರ್ಥಿಗಳಿಗೇ ಬಿಟ್ಟು ಬಿಟ್ಟರೆ ಆ ಕೆಲಸ ಸಮರ್ಪಕವಾಗಿ ನಡೆಯುವುದಿಲ್ಲ. ಆದ್ದರಿಂದ ಡೈರೆಕ್ಟರ್ ಆಫ್ ಎಜುಕೇಷನ್ ಅವರನ್ನೋ ಅಥವಾ ಬೇರೆ ಯಾವುದಾದರೂ ಒಬ್ಬ ಆಫೀಸರನ್ನೋ ನೇಮಕಮಾಡಿ ಈ ವಿದ್ಯಾರ್ಥಿಗಳು ಯಾರು ಯಾರು ಎಲ್ಲೆಲ್ಲಿ ಹೋಗಬೇಕು ಅವರಿಗೆ ಏನು ಸಹಾಯ ಹೊಂದಿಸಬೇಕು ಎಂಬುದನ್ನು ಆಲೋಚಿಸುವುದಕ್ಕೆ ಶೀಘ್ರವಾಗಿ ಒಂದು ಪ್ರಣಾಳಿಕೆಯನ್ನು ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಹದಿನೇಳನೆಯ ಪ್ರಕರಣದಲ್ಲಿ ಇಂಡಿಯನ್ ಮೆಡಿಸನ್ ವಿಚಾರ ಹೇಳಿದ್ದಾರೆ. ದೇಶೀಯ ವೈದ್ಯಕ್ಕೆ ಬೇಕಾದಷ್ಟು ಹಣವನ್ನು ತೆಗೆದಿಟ್ಟಿದ್ದಾರೆ. ಅದೇ ರೀತಿ ಅದು ಅಭಿವೃದ್ಧಿಯಾಗುವುದಕ್ಕೆ ಒಂದು ಪ್ಲಾನ್ ಕೂಡ ಸಿದ್ಧವಾಗಿದೆ. ಆದರೆ ಈ ವಿಷಯದಲ್ಲಿ ಎಷ್ಟುಮಟ್ಟಿಗೆ ಶ್ರದ್ಧೆಯಿಂದ ಕೆಲಸ ನಡೆಯಬೇಕೋ ಅಷ್ಟುಮಟ್ಟಿಗೆ ನಡೆದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಮೈಸೂರಿನ ಆಯುರ್ವೇದ ಕಾಲೇಜಿನಲ್ಲಿ ಸ್ಟ್ರೈಕ್ 2-3 ತಿಂಗಳ ಕಾಲ ನಡೆಯಿತು. ಈಗ ಶಾಂತವಾಗಿದೆ. ಈ ವಿಷಯದಲ್ಲಿ ಮಂತ್ರಿಗಳು ಶ್ರದ್ಧೆ ವಹಿಸಬೇಕೆಂದು ಹೇಳುತ್ತೇನೆ. ಆಯುರ್ವೇದದಲ್ಲಿ ಹೆಚ್ಚಾಗಿ ಶ್ರದ್ಧೆ ಇರಬೇಕು. ಅಂತಹವರು ಈ ಕೆಲಸ ಕೈಕೊಳ್ಳಬೇಕು. ಕೈಕೊಂಡು ಇದನ್ನು ಅಭಿವೃದ್ಧಿ ಸ್ಥಿತಿಗೆ ತರಬೇಕಾಗಿದೆ. ಏಕೆಂದರೆ ಇಂಡಿಯಾ ಸರಕಾರದವರು ಬೇಕಾದಷ್ಟು ಹಣವನ್ನು ಇದಕ್ಕೆ ತೆಗೆದಿಟ್ಟಿದ್ದಾರೆ. ಮೈಸೂರಿಗೂ ಕೂಡ ಬೇಕಾದಷ್ಟು ಹಣ ಕೊಡುವುದಕ್ಕೆ ಸಿದ್ಧವಾಗಿದ್ದಾರೆ.

ಕಟ್ಟಕಡೆಯದಾಗಿ ಆಹಾರ ಪದಾರ್ಥಗಳ ಬೆಲೆಗಳ ವಿಷಯವನ್ನು ಪ್ರಸ್ತಾಪಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅದರ ಬಗ್ಗೆ ಒಂದ ಪ್ರತ್ಯೇಕ ಪ್ಯಾರಗ್ರಾಫೇಇದೆ. ಈ ಆಹಾರಪದಾರ್ಥಗಳ ಧಾರಣೆ ವಿಷಯ ಒಂದು ವಿರೋಧಾಭಾಸವೆಂದೇ ಹೇಳಬಹುದು. ಮೊದಲನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರವಾಗಿ ಹೆಚ್ಚುಜಮೀನುಗಳು ಆಬಾದಿಗೆ ಬಂದು ಬೆಳೆ ಬಂದಿದೆ ಎಂದು ಒಂದುಕಡೆ ಉಲ್ಲೇಖಿಸಿದೆ. 2,600 ಕೋಟಿಗಿಂತ ಹೆಚ್ಚಾಗಿ ಹಣ ಖರ್ಚುಮಾಡಿ ಪಂಚವಾರ್ಷಿಕ ಯೋಜನೆಯಿಂದ ಸಮೃದ್ಧಿ ಪಡೆಯಬೇಕು, ವ್ಯವಸಾಯಕ್ಕೆ ಹೆಚ್ಚುಗಮನ ಕೊಡಬೇಕು, ಅದಕ್ಕಾಗಿ ನೀರಾವರಿ ಯೋಜನೆಗಳನ್ನು ಮಾಡಬೇಕು ಎಂದು ಮೊಟ್ಟ ಮೊದಲನೆಯದಾಗಿ ನಮ್ಮ ಪ್ರೈಂ ಮಿನಿಸ್ಟರ್ ನೆಹ್ರೂಅವರೇ ಹೇಳಿದ್ದಾರೆ. ಹೋದ ವರ್ಷದ ಆರಂಭದಲ್ಲಿ ಎಲ್ಲಾ ರಾಜ್ಯಗಳಲ್ಲೂ, ಪ್ರಾಂತಗಳಲ್ಲೂ ಮತ್ತು ಕೇಂದ್ರದಲ್ಲಿಯೂ ಕೂಡ ಬಹಳ ಸಂತೋಷ ಭರಿತವಾದ ಭಾಷಣಗಳನ್ನು ಮಾಡಿದರು. ನಮ್ಮ ಇಂಡಿಯಾ ದೇಶ ಆಹಾರದ ವಿಷಯದಲ್ಲಿ ಬಹಳ ಮುಂದುವರೆದಿದೆ, ಇನ್ನು ನಮಗೆ ಯಾವ ವಿಧವಾದ ಕ್ಷಾಮಭೀತಿಯೂ ಇಲ್ಲ, ಯಾವ ಕೊರತೆಯೂ ಇಲ್ಲ, ಧಾರಣೆವಾಸಿಗಳು ಬಹಳ ಕಡಮೆಯಾಗುತ್ತವೆ ಎಂದು ಈ ರೀತಿಯಾಗಿ ಸಂತೋಷದ ಕೆಲವು ಘೋಷಣೆಗಳು ಹೊರಟವು. ಅದನ್ನು ಕೇಳಿ ಬಹಳ ಸಂತೋಷದಿಂದ ಇದ್ದೆವು. ಆದರೆ ಕೆಲವು ತಿಂಗಳುಗಳೊಳಗೇ ಆಹಾರ ಪದಾರ್ಥಗಳ ಬೆಲೆಗಳು ಏರುವುದಕ್ಕೆ ಉಪಕ್ರಮವಾಯಿತು. ಬೇಕಾದಷ್ಟು ಆಹಾರ ಪದಾರ್ಥಗಳಿವೆ, ಹೊರಗಿನಿಂದಲೂ ತರಿಸುತ್ತೇವೆ; ಅಲ್ಲಿಗೂ ಸರಬರಾಯಿ ಮಾಡುತ್ತೇವೆ ಎಂದು ಕೇಂದ್ರದ ಮಂತ್ರಿಗಳೂ ಹೇಳುತ್ತಿದ್ದರೂ ನಮ್ಮ ಮಂತ್ರಿಗಳು ಹೇಳುತ್ತಿದ್ದರು. ಆದರೆ ನಮ್ಮ ಬೆಂಗಳೂರಿನಲ್ಲಿರುವ ನಿಯಮಿತವಾದ ವರಮಾನವಿರುವವರ ಸ್ಥಿತಿ ಬಹಳ ಶೋಚನೀಯವಾಗಿದೆ. ರೂಪಾಯಿಗೆ $1\frac{1}{2}$ ಸೇರು ಅಕ್ಕಿಕೂಡ ಸಿಕ್ಕುವುದು ಬಹಳ ಕಷ್ಟವಾಗಿದೆ. ಒಂದು ಪಲ್ಲಾ ಅಕ್ಕಿಗೆ 60 ರೂಪಾಯಿಗಳಿಂದ 70 ರೂಪಾಯಿಗಳವರೆಗೆ ಏರಿದೆ. ಸರ್ಕಾರಿ ಡಿಪೋ ಮತ್ತು ಫೇರ್‌ಪ್ರೈಸ್ ಡಿಪೋ ಎಂಬುದಾಗಿ ತೆರೆದು ರೂಪಾಯಿಗೆ $1\frac{3}{4}$ ಸೇರು ಮತ್ತು 2 ಸೇರಿನಂತೆ ಕೆಲವು ದಿವಸ ಅಕ್ಕಿಯನ್ನು ಒದಗಿಸುತ್ತಿದ್ದರು. ಅಲ್ಲಿಗೆ ನಾವು ಹೋದರೆ ನಾನು ಹೇಳುವುದು ದೇವರಮುಂದೆ ಹೇಳುವ ಹಾಗೆ ಸತ್ಯವಾದ ವಾಕ್ಯ—ಸರ್ಕಾರವನ್ನು ಬಯ್ಯುತ್ತಿದ್ದಾರೆ. ಏಕೆಂದರೆ ಬಾಯಲ್ಲಿ ಹೇಳುವುದೊಂದು ಕೈಯಲ್ಲಿ ಮಾಡುವುದೊಂದು ; ಸುಮ್ಮನೆ ಹೇಳುತ್ತಾರೆ. ಆದರೆ ಮಂತ್ರಿಗಳನ್ನು ನಾನು ಆಕ್ಷೇಪಿಸುವುದಿಲ್ಲ. ನೌಕರರು ನಿಷ್ಠೆಯಿಂದ ನಡೆಯಬೇಕು. ಈಗ ಪ್ರಜಾರಾಜ್ಯ ಬಂದಿದೆ, ನಾವು ಸತ್ಯದಿಂದ ನಡೆಯಬೇಕು, ಜನರಿಗೆ ಸರಿಯಾಗಿ ಆಹಾರ ಪದಾರ್ಥ ಸರಬರಾಯಿ ಮಾಡಬೇಕು ಎಂಬ ಮನೋಭಾವ ಮಂತ್ರಿಗಳಿಗೆ ಬಂದಿದೆ. ಆದರೆ ನೌಕರರು ಪ್ರಾಮಾಣಿಕತೆಯಿಂದ ನಡೆದುಕೊಳ್ಳುತ್ತಿಲ್ಲವೆಂದು ನಾನು ಹೇಳಿದ್ದೇನೆ. ಅಂಗಡಿಗೆ ಅಕ್ಕಿಬಂದ ಕ್ಷಣದಲ್ಲೇ ನಾಲ್ಕೈದು ಜನ ಕೊಂಡನಂತರ ಬಂದದ್ದು ಮುಗಿಯಿತೆಂದು ಹೇಳುತ್ತಾರೆ. ಇದನ್ನು ನೋಡಿದರೆ ಅಂಗಡಿಯವರಿಗೂ ಮತ್ತು ಇತರರು ಯಾರಿಗಾದರೂ ಏನಾದರೂ ಅಂಡರ್‌ಸ್ಟ್ಯಾಂಡಿಂಗ್ ಇದೆಯೋ ಏನೋ ಅನ್ನಿಸುತ್ತದೆ. ಸರಿಯಾದ ವಿಚಾರ ಗೊತ್ತಿಲ್ಲ. ಅಂತೂ ಸರಬರಾಯಿಯಾದುದು ಬಹು ಬೇಗ ಖರ್ಚಾಗುತ್ತದೆ. ಹೀಗಾಗಿ ಯಾವ ಪ್ರಜೆಗೂ ಅಕ್ಕಿ ಸುಲಭ ದರದಲ್ಲಿ ಸಿಕ್ಕಲು ಅವಕಾಶವಿಲ್ಲವಾಗಿದೆ. ಈಗಲೂ ಕೂಡ ಶೋಚನೀಯ ಪರಿಸ್ಥಿತಿಯಿದೆ. ಇದನ್ನು ಯಾವರೀತಿಯಲ್ಲಿ ಬಗೆಹರಿಸಬೇಕೆಂಬುದೇ ತಿಳಿಯದೆ ನಿರಾಶೆಯಾಗಿದೆ. ಈಗ ಎರಡನೆಯ ಪ್ಲಾನ್‌ನಲ್ಲಿ ರೈತರಿಗೆ ಎಕನಾಮಿಕ್ ಪ್ರೈಸ್ ದೊರೆಯಬೇಕೆಂದು ಮಾನ್ಯ ಸ್ನೇಹಿತರು ಹೇಳಿದರು. ಹಾಗೆ ಮಾಡಲು ಅಡ್ಡಿಯಿಲ್ಲ ; ಮಾಡಬಹುದು. ರೈತರೇ ನೇರವಾಗಿ ತಂದು ನಮಗೆ ಸರಬರಾಯಿ ಮಾಡಿ ಮಧ್ಯೆಯಾರೂ ಸ್ವಾಹ ಮಾಡದಿದ್ದರೆ ಬಹಳ ಸಂತೋಷವಾಗಿ ಅದನ್ನು ಒಪ್ಪಬಹುದು. ಆದರೆ ನಾವು ಕೊಡುವ ಹಣದಲ್ಲಿ ರೈತರಿಗೆ ಎಷ್ಟು ಭಾಗ ಸಿಕ್ಕುವುದೆಂಬುದನ್ನು ಮಾನ್ಯ ಮಿತ್ರರು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದ ಯಂತ್ರ ಸರಿಯಾಗಿ ತೃಪ್ತಿಕರವಾಗಿ ಕೆಲಸಮಾಡುತ್ತಿಲ್ಲ ಎಂದು ನಾನು ಬಹಳ ವಿಷಾದದಿಂದ, ಬಹಳ ಸಂಕೋಚದಿಂದ ಹೇಳಬೇಕಾಗಿದೆ. ಇದನ್ನು ಯಾವರೀತಿ ಹೇಗೆ ಸರಿಪಡಿಸಬೇಕೆಂಬುದಕ್ಕೆ ಗಮನ ಕೊಡಬೇಕು.

It is stated in the Governor's Address that in order to remove distress, Government is making available to the public, rice and wheat secured from the Government of India through co-operative societies, local bodies and approved wholesalers and retailers. Who are these wholesalers and retailers? What is the guarantee that they supply the food grains in an honest manner to the people? Somehow or other, there is favouritism in this matter. We should stop this favouritism at all costs and, as far as food supply is concerned, the Government machinery should be very vigorous and work very smoothly. This is a very urgent problem.

A MEMBER.—On a point of order, Sir. Can a member change the language in the course of his speech?

Mr. SPEAKER—I notice that the Hon'ble Sri Ramaiya has suddenly changed the language in the middle of his speech. According to rules, a member is not allowed to change the language in the middle of his speech. If it is a quotation, it can be done. I want to know whether it is a quotation or a change in the language in the middle of his speech.

Sri P. R. RAMAIYA.—Kindly excuse me, Sir. I shall continue my speech in Kannada.

*Sri B. NARAYANASWAMY (Mysore—South).—Sir, I do not want to comment on the ruling given by you. But so far as our rules are concerned; it is nowhere provided that a member should not change his language. Supposing I am speaking in English and if I feel that a particular

(SRI B. NARAYANASWAMY.)

matter can be made easily understandable by speaking in Kannada, I can speak in Kannada. Nowhere is it provided in the rules that I should not change the language. The Hon'ble Speaker will kindly enlighten us as to where we have such rules. Besides, there has been no precedent or convention of that type so far as the old Mysore Assembly members are concerned.

Mr. SPEAKER.—It is really surprising to know that an Hon'ble Member can change the language in the midst of the same speech. I have not come across anything of that sort. It may not have been provided in the Rules. In some of the Assemblies it has been specifically provided for in the Rules themselves. It is a matter of convention everywhere that a member who starts speaking in one language should continue in the same language till he finishes his speech. I do not know the practice that was prevailing in the old Mysore Assembly. I am told by members that the same practice was in vogue here also. If that is so, I am really surprised how the Hon'ble Member can raise a point of order like this.

4 P.M.

Sri B. NARAYANASWAMY.—If it is your ruling I bow to that decision. If it is mere convention, then as I just now sub-mitted to the Chair, the tradition here is that an Hon'ble Member is entitled to speak in any language he likes. If he is able to express a point better in English or Kannada he can do that in the course of the same speech. Therefore, this is no surprise to us.

Mr. SPEAKER.—The Hon'ble Member wants to know whether it is a ruling of the Chair. It is a ruling based on convention.

Sri K. PUTTASWAMY (Srirangapatna).—If the Chair is referring to convention, then the convention of the House, as far as Mysore is concerned, is to speak in a mixed language.

Mr. SPEAKER.—I should say that as this is a new Assembly, there is no convention as such pertaining to it. The conventions that are there in the other Assemblies apply here also. If the Hon'ble Member is under the impression that this is the continuation of the old Mysore Legislative Assembly, then I for one cannot agree with him. This is a new Assembly altogether. Of course, the Rules of the old Mysore Legislative Assembly apply here, but, so far as conventions are concerned, we can create conventions and adopt conventions from whatever sources they may come, from the old Mysore Assembly or from the Bombay or Madras Assemblies.

Sri K. PUTTASWAMY.—It is a question of convenience.

Mr. SPEAKER.—If we are to be guided merely by convenience, then it will only mean that an Hon'ble Member may start speaking in Kannada, then change to Marathi, then to Hindi and then to English or French. That would become a babel of languages and it would be rather impossible to tolerate it.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ನನ್ನ ಕೈಯಲ್ಲಿ ಗವರ್ನರ್ ಅವರ ಭಾಷಣದ ಇಂಗ್ಲೀಷ್ ಪ್ರತಿ ಇದೆ. ನನಗೆ ಭಾಷಣದ ಕನ್ನಡ ಪ್ರತಿಯನ್ನು ಒದಗಿಸಿಲ್ಲವಾದುದರಿಂದ ನಾನು ಇಂಗ್ಲೀಷ್ ಪ್ರತಿಯಿಂದ ಗವರ್ನರ್ ಅವರ ಭಾಷಣವನ್ನು ಓದಿದೆ. ಅದೇ ಕಾಲದಲ್ಲಿ ಕೆಲವು ಇಂಗ್ಲೀಷ್ ಪದಗಳು ಬಾಯಲ್ಲಿ ಬಂದುವು.

ಅಧ್ಯಕ್ಷರು.—"Quotations" ಮಾತ್ರವಾದರೆ ಓದಬಹುದು.

ಶ್ರೀ ಪಿ. ಆರ್. ರಾಮಯ್ಯ.—ಸ್ವಲ್ಪ ಬಲವಾಗಿ, strong language ಉಪಯೋಗಿಸಬೇಕಾದರೆ ಇಂಗ್ಲೀಷ್ ಭಾಷೆ ಬರುತ್ತದೆ, ಬಯ್ಯುವಾಗ ಇಂಗ್ಲೀಷ್ ಬರುವ ಹಾಗೆ. ಆದುದರಿಂದ ಅಷ್ಟು ಬಲವತ್ತರವಾಗಿ ಆ ನಿಯಮವನ್ನು ಉಪಯೋಗಿಸದೆ ಸ್ವಲ್ಪ ಅವಕಾಶ ಕೊಟ್ಟರೆ ಒಳ್ಳೆಯದೆಂದು ನನ್ನ ಅರಿಕೆ, ಅಷ್ಟೆ.

